

# ಒಳಾಂಗಣ ವಿನ್ಯಾಸ ಮಕ್ಕಳ ಮನೋವಿಕಾಸ

**ಮಕ್ಕಳ ಕೋಣೆಯನ್ನು ಸಿಂಗರಿಸಲು ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಿಲ್ಲ. ಆ ಜವಾಬ್ದಾರಿಯನ್ನು ಮಕ್ಕಳೇ ನಿರ್ವಹಿಸುವಂತೆ ಮಾಡಿದರಾಯಿತು.**

■ ಸ್ವಯಂಪ್ರಭಾ

‘ಇಂಟೀರಿಯರ್ ಡೆಕೊರೇಷನ್’ ಈಗ ಬಹು ದೊಡ್ಡ ಉದ್ಯಮ! ಮಕ್ಕಳ ಕೋಣೆಗಳಲ್ಲಿ ರಾತ್ರಿಯ ಸಮಯದಲ್ಲಿ ಆಕಾಶಕಾಯಗಳು, ನಕ್ಷತ್ರಗಳು ಗೋಚರಿಸುವಂತೆ, ಡೊರೆಮೊನ್, ಪಿಂಕ್ ಪ್ಯಾಂಥರ್, ನಿಂಜಾ ಹಟೋರಿ ಮುಂತಾದವು ಗೋಡೆಯ ಮೇಲೆ ಏನೋ ಕರಾಮತ್ತು ಮಾಡುತ್ತಿರುವಂತೆ ತೋರುವ ಪೇಂಟಿಂಗ್ ಮಾಡಿಸುವುದು ಮರದ ಮೇಲೆ ಮಲಗುವಂತಹ ಅನುಭವ ನೀಡುವ ಮಂಚಗಳು, ಸಣ್ಣದೊಂದು ಟೆಂಟಿನೊಳಗೆ ನುಸುಳಿಕೊಂಡು ಕುಳಿತುಕೊಳ್ಳುವ ವ್ಯವಸ್ಥೆ, ಬೊಂಬೆಗಳ ಉಯ್ಯಾಲೆ, ತೊಟ್ಟಿಲು, ಗೋಡೆಯ ತುಂಬಾ ಬಾರ್ಬಿ ಸುಂದರಿಯರ ಚಿತ್ರ – ಹೀಗೆ ಮಕ್ಕಳ ಕೊಠಡಿಯನ್ನು ಶೃಂಗಾರ ಮಾಡುವುದು ಒಂದು ಉದ್ಯಮವೂ ಹೌದು.

ಇವೆಲ್ಲ ಶ್ರೀಮಂತ ಮನೆಗಳ ಬಾಬತ್ತು. ಕೈಗೆಟಕುವ ಖರ್ಚಿನಲ್ಲಿಯೇ, ಮಕ್ಕಳ ಕೊಠಡಿಯನ್ನು ಅವರೇ ಶೃಂಗಾರ ಮಾಡುವಂತೆ ಹುರಿದುಂಬಿಸುವ ಮತ್ತೊಂದು ದಾರಿಯೇ ಇದೆ.

ಮಕ್ಕಳ ಕೋಣೆಯನ್ನು ಸಿಂಗರಿಸುವ ಯೋಚನೆ ಪಾವನಿಗೆ ಬಂತು. ಅವಳು ತನ್ನ ಮಕ್ಕಳಾದ ಅಜಯ್ ಮತ್ತು ಅಜಿತ್ ಇಬ್ಬರನ್ನೂ ಕರೆದುಕೊಂಡು ಸಂಜೆ ವಾಕಿಂಗ್ ಹೋಗಿದ್ದಳು. ಅಜಯ್ ಏಳನೇ ತರಗತಿ, ಅಜಿತ ಎರಡನೇ ತರಗತಿಯ ವಿದ್ಯಾರ್ಥಿ. ಕುಣಿಯುತ್ತ, ಕಲ್ಲುಗಳನ್ನು ಹೆಕ್ಕುತ್ತ ಬಿಸಾಡುತ್ತಾ ಅಮ್ಮನ ಹಿಂದೆ ಮುಂದೆ ಸುತ್ತುತ್ತ ವಾಕಿಂಗ್ ಹೋಗುತ್ತಿದ್ದ ಮಕ್ಕಳ ಬಳಿ ಅವಳು ಪ್ರಶ್ನೆಗಳನ್ನು ಕೇಳುತ್ತಿದ್ದಳು. ಮನೆಯೊಂದರ ಕಾಂಪೌಂಡ್‌ನಿಂದ ಹೊರಚಾಚಿದ್ದ ಗಿಡ ತೋರಿಸಿ, ‘ಇದ್ಯಾವ ಎಲೆ?’ ಎಂದಳು. ‘ದಾಸವಾಳ’ ಎಂದ ಮಗ. ಒಂದು ಎಲೆಯನ್ನು ಕಿತ್ತುಕೊಂಡರು. ಬಳಿಕ ಅವರಿಗೆ ಕಂಡಿದ್ದು ಮಾವಿನ ಮರ. ಹಣ್ಣೆಲೆಯೊಂದನ್ನು ಹೆಕ್ಕಿಕೊಂಡರು. ಕರಿಬೇವಿನ ಸೊಪ್ಪು, ಕೊತ್ತಂಬರಿ ಸೊಪ್ಪು, ಪಾಲಕ್ ಎಲೆಗಳು – ಹೀಗೆ ಹತ್ತರಿಂದ ಹನ್ನೆರಡು ಬಗೆಯ ಎಲೆಗಳನ್ನು ಸಂಗ್ರಹಿಸುತ್ತ, ಅವರು ಮನೆಗೆ ಬಂದರು.

ಪಾವನಿ ಮಕ್ಕಳಿಗೆ ಹೇಳಿದಳು, ‘ಈ ಎಲೆಗಳನ್ನೇ ನೋಡುತ್ತ, ಅಥವಾ ಅವುಗಳನ್ನೇ ಅಚ್ಚಾಗಿ ಬಳಸಿಕೊಂಡು ಗೋಡೆಯ ಮೇಲೆ ಪೆನ್ಸಿಲ್‌ನಿಂದ ಚಿತ್ರ ಬರೆಯಿರಿ. ನಿಮಗೆ ತೋಚಿದಂತೆ ಬರೆಯಿರಿ’ ಎಂದು ಹುರಿದುಂಬಿಸಿದಳು. ಚಿಕ್ಕವನಿಗೆ ಅಷ್ಟೇನೂ ಅರ್ಥವಾಗದೇ ಇದ್ದರೂ ಅಣ್ಣನಿಗಿಂತ ತಾನೇನೂ ಕಮ್ಮಿ ಇಲ್ಲ ಎನ್ನುತ್ತ ಅವನೂ ಪೆನ್ಸಿಲ್ ಹಿಡಿದು ಗೀಚಲಾರಂಭಿಸಿದ. ಮಕ್ಕಳು ಗೋಡೆಯ ಮೇಲೆ ಬರೆದ ಚಿತ್ರಗಳನ್ನು ಪಾವನಿ ಅಲ್ಲಲ್ಲಿ ಸ್ವಲ್ಪ ಸರಿ ಮಾಡಿದಳು. ಮರುದಿವಸ ಬಳ್ಳಿಗೆ ಕಡು ಹಸಿರು, ಎಲೆಗಳಿಗೆ ತಿಳಿಹಸಿರು ಬಣ್ಣ ಖರೀದಿಸಿದಳು. ಜೊತೆಗೆ ಒಂದಿಷ್ಟು ಕೆಂಬಣ್ಣ.

ಅಮ್ಮ–ಮಕ್ಕಳು ಸೇರಿ ಇಡೀ ಕೊಠಡಿಯ ಗೋಡೆಯಲ್ಲಿ ಹೂದೋಟವನ್ನೇ ಬಿಡಿಸಿದ್ದರು. ತಾವೇ ಬರೆದ ಚಿತ್ರಗಳನ್ನು ತಮ್ಮದೇ ಕೊಠಡಿಯಲ್ಲಿ ನೋಡುತ್ತ ಮಕ್ಕಳು ಸಂತೋಷಪಡದೆ ಇರುತ್ತಾರೆಯೇ?

ಹೀಗೆ ಮಾಡಬೇಕೆಂದಿಲ್ಲ. ಅವರಿಗಿಷ್ಟವಾದ ಚಿತ್ರವೂ ಇರಲಿ. ಜೊತೆಗೆ ಗಾಂಧಿ, ಅಂಬೇಡ್ಕರ್ ಅಂಥವರ ಚಿತ್ರಗಳೂ ಇರಲಿ. ಅವರ ಕತೆಯೂ ತಿಳಿದಿರಲಿ. ಮುಂದಿನ ಬೇಸಿಗೆ ರಜೆಯಲ್ಲಿ ಎಲ್ಲಿಗೆ ಪ್ರವಾಸ ಹೋಗಬೇಕು ಎಂಬ ಕನಸು ಕಂಡಿದ್ದರೆ ಅಥವಾ ಯೋಜನೆ ರೂಪಿದ್ದರೆ, ಆ ಜಾಗಕ್ಕೆ ಸಂಬಂಧಿಸಿದ ಚಿತ್ರಗಳನ್ನು ಇಂಟರ್ನೆಟ್‌ನಲ್ಲಿ ಹುಡುಕಿ, ಒಂದು ಪ್ರಿಂಟ್ ಅಂಟಿಸಿಕೊಳ್ಳಬಹುದು.

ಗೋಡೆಗಳು ಗಲೀಜಾಗಬಾರದು ಎನ್ನುವ ಮನೋಭಾವವೇ ಸರಿಯಾದುದಲ್ಲ. ಗೋಡೆಗಳಿರುವುದೇ ಮಕ್ಕಳು ತಮ್ಮ ಸಾಧ್ಯತೆಗಳನ್ನು ಅನಾವರಣ ಮಾಡಲು. ಬಾಡಿಗೆ ಮನೆಯಾದರೆ, ಬಿಡುವಾಗ ಹೇಗಿದ್ದರೂ ಪೇಂಟಿಂಗ್ ಮಾಡಿಸಲೇ ಬೇಕು. ಸ್ವಂತ ಮನೆಯಾದರೆ, ಒಂದೈದಾರು ವರ್ಷ ಗೋಡೆಗಳಲ್ಲಿ ಚಿತ್ತುಗಳಿದ್ದರೆ ಕಷ್ಟವೇನು? ಅವು ನಮ್ಮದೇ ಮಕ್ಕಳ ಬೆಳವಣಿಗೆಯ ಹೆಜ್ಜೆಗಳನ್ನು ತೋರಿಸುವ ಕನ್ನಡಿಗಳಿದ್ದಂತೆ.

ಏಳೆಂಟು ವರ್ಷ ತುಂಬುತ್ತಿದ್ದಂತೆಯೇ, ಗೋಡೆಯಲ್ಲಿ ಬರೆಯಬಾರದು ಎಂಬುದನ್ನು ಮಕ್ಕಳೇ ಅರಿತುಕೊಳ್ಳುತ್ತಾರೆ. ಎಲ್ಲ ಪಾಠಗಳನ್ನೂ ಅಪ್ಪ ಅಮ್ಮನೇ ಬೋಧಿಸಲೇಬೇಕೆಂದಿಲ್ಲ. ಅವರೇ ಎಡವುತ್ತ, ತಮ್ಮನ್ನು ತಾವು ತಿದ್ದಿಕೊಳ್ಳುತ್ತ, ತಮ್ಮ ಸುತ್ತಮುತ್ತನ್ನು ಗಮನಿಸುತ್ತ, ತಾವೀಗ ದೊಡ್ಡವರಾಗಿದ್ದೇವೆ ಎಂದು ತಮಗೆ ತಾವೇ ಹೇಳಿಕೊಳ್ಳುತ್ತ ಬೆಳೆಯುವುದನ್ನು ಗಮನಿಸುವ ತಾಳ್ಮೆಯೊಂದು ನಮ್ಮಲ್ಲಿ ಇರಬೇಕಷ್ಟೆ.

ಸುಕೇಶ್ ಎಲ್‌ಕೆಜಿ ಇದ್ದಾಗ, ಜಲ್ಲಿ ಕಲ್ಲುಗಳನ್ನು ಕಿಸೆಯಲ್ಲಿ ತುಂಬಿಕೊಂಡು ಬರುತ್ತಿದ್ದ. ಶಿವಾನಿ ಪುಟ್ಟಿ ಪೆನ್ಸಿಲ್‌ಗಳನ್ನು ಚೂಪು ಮಾಡುವಾಗಿನ ಕಸದ ಬಗ್ಗೆ ಬಹಳ ಆಸಕ್ತಿ ಹೊಂದಿದ್ದಳು. ಕೈಗೆ ಸಿಕ್ಕ ಪತ್ರಿಕೆಗಳಿಂದ ಹಕ್ಕಿ, ಬೆಕ್ಕುಗಳ ಚಿತ್ರ ಕತ್ತರಿಸುವ ಗೀಳು ನೇಹಾ ಪುಟ್ಟಿಗೆ. ಒಬ್ಬೊಬ್ಬರಿಗೆ ಒಂದೊಂದು ಗೀಳು, ಇಷ್ಟ. ಅವುಗಳನ್ನೇ ಬಳಸಿ ತಮ್ಮ ಕೊಠಡಿಯನ್ನು ಸುಂದರವಾಗಿ ಇಟ್ಟುಕೊಳ್ಳುವಂತೆ ಹೇಳುವುದಕ್ಕೆ ಚೂರೇ ಚೂರು ವ್ಯವಧಾನ ಬೇಕಷ್ಟೆ. ■